# Government of Karnataka
## Deposition Sheet (R.P.N.57) Form 4 Criminal
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 405/2024 |

ದಿನಾಂಕ 15-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 2

| | |
|---|---|
| ಹೆಸರು | ಶ್ರೀಮತಿ ಪುಷ್ಪಲತಾ .ಎಸ್. ಕವಲೂರು |
| ಗಂಡನ ಹೆಸರು | ಶರಣಗೌಡ |
| ವಯಸ್ಸು | 43 ವರ್ಷ |
| ಉದ್ಯೋಗ | ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕೊಪ್ಪಳ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

1. ನಾನು 2023 ರಿಂದ 2024 ರವರೆಗೆ ರಾಯಚೂರನಲ್ಲಿ ಹಿರಿಯ ಭೂ ವಿಜ್ಞಾನಿ ಎಂದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ.

2. ದಿನಾಂಕ: 15-05-2024 ರಂದು ಮಧ್ಯಾಹ್ನ 2-30 ಗಂಟೆಗೆ ನನಗೆ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದ ಮೇರೆಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರಾದ ಚಾಸಾ-2 ರಿಂದ 5 ಸ್ಥಳಕ್ಕೆ ಹೋಗುವುದಾಗಿ ತಿಳಿಸಿದೆನು. ನಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು 3 ಇವರ ಜೊತೆಗೆ ಸರಕಾರಿ ಜೀಪ್ ನಂಬರ್ ಕೆ ಎ 42, ಜಿ 601 ನೇದ್ದರಲ್ಲಿ ಕುಳಿತುಕೊಂಡು ಮಧ್ಯಾಹ್ನ 2-30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ ನಂ 35/2/2 ಇದರಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿರುತ್ತದೆ. ಕಂದಾಯ ಅಧಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿರುತ್ತದೆ. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿರುತ್ತಾರೆ. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಟೇಪ್ ನಿಂದ ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ 312000/- ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ನಾನು ಪಂಚರ ಸಮಕ್ಷಮ ಮಧ್ಯಾಹ್ನ 3-00 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದೆನು. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿದಾರರು ದೂರನ್ನು

ನೋಡಿ ಗುರುತಿಸಿದ್ದು ದೂರನ್ನು ನಿ ಪಿ 1 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ ಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಜನರು ಇಲ್ಲದೆ ಇರುವ ಕಾರಣ ನಮ್ಮ ಇಲಾಖೆಯ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿರುತ್ತೇನೆ. ಸದರಿ ಪಂಚನಾಮೆಗೆ ಪಂಚ ಸಾಕ್ಷಿದಾರರಾದ ಶಿವಪ್ಪ ತಂದೆ ಭೀಮಣ್ಣ ವಗಡಂಬಳಿ, ಭೀಮಣ್ಣ ತಂದೆ ಸಿದ್ದಪ್ಪ ಇವರು ಸಹಿ ಮಾಡಿರುತ್ತಾರೆ.

**ಪಾಟೀಸವಾಲು: ಆರೋಪಿತರ ಪರ ಶ್ರೀ ಎಸ್.ಪಿ. ವಕೀಲರಿಂದ:-**

1. ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಮೌಖಿಕ ಆದೇಶದ ಮೇರೆಗೆ ರಾಯಚೂರಿನಿಂದ ನನ್ನ ಜೊತೆ ಒಬ್ಬ ಸಿಬ್ಬಂದಿ ಬಂದಿರುತ್ತಾರೆ. ದೇವದುರ್ಗದಲ್ಲಿ ತಹಶೀಲ್ದಾರ ಕಚೇರಿಗೆ ಬಂದಿರುತ್ತೇನೆ. ಪಂಚರನ್ನು ನಾನೆ ತಹಶೀಲ್ದಾರ ಮುಖೇನ ಬರಮಾಡಿಕೊಂಡಿರುತ್ತೇನೆ. ಅಲ್ಲಿಂದ ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಮರಳು ಕುಪ್ಪೆಯಾಗಿ ಶೇಖರಣೆ ಮಾಡಿಟ್ಟಿರುವುದು ಕಂಡು ಬಂದಿರುತ್ತದೆ. ಅಂದಾಜು ಮರಳಿನ 03 ಕುಪ್ಪೆಗಳು ಇದ್ದವು. ತಹಶೀಲ್ದಾರ ಕಚೇರಿಯಿಂದ ಗೋಪಾಳಪುರ ಗ್ರಾಮ ಸುಮಾರು 12 ಕಿ ಮಿ ದೂರ ಆಗುತ್ತದೆ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಗುನ್ಹೆ ಸ್ಥಳ ಊರಿನ ಸಮೀಪದಲ್ಲಿರುತ್ತದೆ. ನಾವು ಹೋದಾಗ ಅಲ್ಲಿ ಜನರು ಸೇರಿದ್ದರು ಆದರೆ ನಮ್ಮನ್ನು ನೋಡಿ ಬರಲು ನಿರಕಾರಿಸಿರುತ್ತಾರೆ. ಗುನ್ಹೆ ಸ್ಥಳದಲ್ಲಿ ಸಾರ್ವ ಜನಿಕರನ್ನು ವಿಚಾರಣೆ ಮಾಡಲು ಪ್ರಯತ್ನ ಮಾಡಿರುತ್ತೇವೆ ಅವರು ನಮ್ಮನ್ನು ನೋಡಿ ಬರಲು ನಿರಾಕರಿಸಿರುತ್ತಾರೆ. ಮರಳಿನ ಯಾವ ಕುಪ್ಪೆ ಎಷ್ಟು ಮೆಟ್ರಿಕ್ ಟನ್ ಇತ್ತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

2. ಪಂಚನಾಮೆಯನ್ನು ಚಾಸಾ-4 ರವರು ಬರೆದಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ನಮ್ಮ ಇಲಾಖೆಯ ಅಧಿಕಾರಿಗಳು ಇದ್ದರು ಸಾರ್ವ ಜನಿಕರು ದೂರದಲ್ಲಿದ್ದರು ಸ್ಥಳಕ್ಕೆ ಬಂದಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ ಬಂದಿ ಪೂರ್ವ ದಿಕ್ಕಿಗೆ ಸ ನಂ 30, ಪಶ್ಚಿಮ ದಿಕ್ಕಿಗೆ ಸ ನಂ 36/2/2, ಉತ್ತರ ಕ್ಕೆ- ಸ ನಂ 35/1, ದಕ್ಷಿಣ ದಿಕ್ಕಿಗೆ ಸ ನಂ 35/5 ಇರುತ್ತದೆ. ಮರಳನ್ನು ಶೇಖರಿಸಿಟ್ಟಿದ್ದ ಜಮೀನು ಸ ನಂ ನ್ನು ಚಾಸಾ-4 ರವರು ಗುರುತು ಮಾಡಿರುತ್ತಾರೆ ನಾನು ಭೂಮಿ ಸಾಫ್ಟವೇರ ಸಹಾಯದಿಂದ ಜಮೀನು ಸರ್ವೆ ನಂಬರ್ ನ್ನು ಗುರುತು ಮಾಡಿರುತ್ತೇನೆ. ಈ ರೀತಿ ನನ್ನ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ. ಪಂಚನಾಮೆ ಮಾಡಿದ ನಂತರ ಸಂಜೆ 6-30 ಗಂಟೆಗೆ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಆ ಸಮಯದಲ್ಲಿ ನಮ್ಮ ಸಿಬ್ಬಂದಿಯವರು ನಮ್ಮ ಜೊತೆಗೆ ಇದ್ದರು. ಪಂಚನಾಮೆ ಮಾಡಿದ ನಂತರ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-2 ರಿಂದ 5 ರವರು ವಾಪಸ್ಸು ಬಂದಿರುತ್ತೇವೆ. ಆದರೆ ಪೋಲಿಸ್ ಠಾಣೆಗೆ ಅವರು ನನ್ನ ಜೊತೆಗೆ ಬಂದಿರುವುದಿಲ್ಲ. ಪರವಾನಿಗೆ ಹೊಂದಿದವರು ಮರಳನ್ನು ಶೇಖರಿಸಿ ಇಡಬಹುದು ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ. ಯಾವ ವಾಹನದ

ಸಹಾಯದಿಂದ ಮರಳನ್ನು ಸಂಗ್ರಹಿಸಿಟ್ಟಿದ್ದಾರೆಂದು ನನಗೆ ಮಾಹಿತಿ ಇಲ್ಲ ಆದರೆ 2ನೇ ಆರೋಪಿ ಮರಳನ್ನು ಸಂಗ್ರಹಿಸಿಟ್ಟಿರುವುದು ಚಾಸಾ-4 ಮತ್ತು ಅಲ್ಲಿದ್ದ ಜನರು ಮಾಹಿತಿಯನ್ನು ತಿಳಿಸಿರುತ್ತಾರೆ. ಚಾಸಾ-4 ರವರ ಮಾಹಿತಿ ಮೇರೆಗೆ ನಾನು ದೂರನ್ನು ಕೊಟ್ಟಿರುತ್ತೇನೆ. ಮರಳು ಸಂಗ್ರಹಿಸಿಟ್ಟಿದ್ದವರ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ. ನೀವು ನಿಮ್ಮ ಮೇಲಾಧಿಕಾರಿಗಳ ಆದೇಶದಂತೆ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ಆ ದಿನ ನಿಮಗೆ ಅಕ್ರಮವಾಗಿ ಮರಳು ಶೇಖರಣೆ ಮಾಡುತ್ತಿದ್ದಾರೆಂದು ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ನೀವು ದಾಳಿ ಮಾಡಲು ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಜಮೀನಿನಲ್ಲಿ ಮರಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-

ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 405/2024 |

ದಿನಾಂಕ 15-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 4 ಪ್ರಾಸಾಃ 3

| | |
|---|---|
| ಹೆಸರು | ಶ್ರೀಮತಿ ನಂದಿನಿ |
| ಗಂಡನ ಹೆಸರು | ಮಂಜುನಾಥ ಪೂಜಾರಿ |
| ವಯಸ್ಸು | 33 ವರ್ಷ |
| ಉದ್ಯೋಗ | ಜೆ ಇ ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರಾಯಚೂರು |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

1. ನಾನು ಸುಮಾರು 2 ವರ್ಷದಿಂದ ರಾಯಚೂರನಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಜೆ ಇ ಎಂದು ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ: 15-05-2024 ರಂದು ಮಧ್ಯಾಹ್ನ 2-30 ಗಂಟೆಗೆ ಚಾಸಾ-1 ರವರೊಗೆ ಮಾನ್ಯ ಜಿಲ್ಲಾಧಿಕಾರಿಯವರ ಮೌಖಿಕ ಆದೇಶದ ಮೇರೆಗೆ ಗೋಪಾಳಪುರ ಗ್ರಾಮದ ಕೃಷ್ಣಾ ನದಿ ತೀರದಿಂದ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ಒಂದು ಹೊಲದಲ್ಲಿ ಸಂಗ್ರಹಿಸಿಟ್ಟಿದ್ದಾರೆಂದು ತಿಳಿಸಿದ್ದು, ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರಾದ ಚಾಸಾ-2 ರಿಂದ 5 ಸ್ಥಳಕ್ಕೆ ಹೋಗುವುದಾಗಿ ತಿಳಿಸಿದರು. ನಮ್ಮ ಜೊತೆ ಸಿಬ್ಬಂದಿಯವರಾದ ಚಾಸಾ-4 ಹಾಗೂ ಪಂಚರಾದ ಚಾಸಾ-2 ಮತ್ತು 3 ಇವರ ಜೊತೆಗೆ ಸರಕಾರಿ ಜೀಪ್ ನಂಬರ್ ಕೆ ಎ 42, ಜಿ 601 ನೇದ್ದರಲ್ಲಿ ಕುಳಿತುಕೊಂಡು ಮಧ್ಯಾಹ್ನ 2-30 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ ನಂ 35/2/2 ಇದರಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿರುತ್ತದೆ. ಕಂದಾಯ ಅಧಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿರುತ್ತದೆ. ಮರಳನ್ನು ಅಮರೇಶ ತಂದೆ ದುರಗಯ್ಯ ಸಾ: ಅಂಜಳ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿರುತ್ತಾರೆ. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಟೇಪ್ ನಿಂದ ಅಳತೆ ಮಾಡಲಾಗಿ ಮರಳಿನ ಕುಪ್ಪೆ ಪ್ರಮಾಣ ಅಂದಾಜು 800 ಮೆಟ್ರಿಕ್ ಟನ್ ಇತ್ತು, ಅದರ ಅಂದಾಜು ಕಿಮ್ಮತ್ತು ರೂ 3,12,000/- ಮರಳು ಸಂಗ್ರಹಣೆ ಮಾಡಿದ ಪರವಾನಿಗೆ ಬಗ್ಗೆ ವಿಚಾರಣೆ ಮಾಡಲಾಗಿ ಇರುವುದಿಲ್ಲ ಎಂದು ಗೊತ್ತಾಯಿತು. ನಂತರ ಸ್ಥಳದಲ್ಲಿ ಚಾಸಾ-1

ರವರು ಪಂಚರ ಸಮಕ್ಷಮ ಮಧ್ಯಾಹ್ನ 3-00 ರಿಂದ 3-30 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ನಾನೆ ಬರವಣಿಗೆ ಮಾಡಿರುತ್ತೇನೆ. ಜಮೀನಿನ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿ ಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಜನರು ಇಲ್ಲದೆ ಇರುವ ಕಾರಣ ನಮ್ಮ ಇಲಾಖೆಯ ಸಿಬ್ಬಂದಿಯವರನ್ನು ಪಂಚರನ್ನಾಗಿ ಮಾಡಿರುತ್ತೇನೆ. ಸದರಿ ಪಂಚನಾಮೆಗೆ ಪಂಚ ಸಾಕ್ಷಿದಾರರಾದ ಶಿವಪ್ಪ ತಂದೆ ಭೀಮಣ್ಣ ವಗಡಂಬಳಿ, ಭೀಮಣ್ಣ ತಂದೆ ಸಿದ್ದಪ್ಪ ಇವರು ಸಹಿ ಮಾಡಿರುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀಸವಾಲು: ಆರೋಪಿತರ ಪರ ಶ್ರೀ ಎಸ್.ಪಿ. ವಕೀಲರಿಂದ:-**

1. ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಮೌಖಿಕ ಆದೇಶದ ಮೇರೆಗೆ ರಾಯಚೂರಿನಿಂದ ನನ್ನ ಜೊತೆ ಚಾಸಾ-1 ರವರು ಬಂದಿರುತ್ತಾರೆ. ಮಾಹಿತಿ ಬಂದಾಗ ನಾನು ಅವರ ಜೊತೆಯಲ್ಲಿದ್ದೇನು. ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ದೇವದುರ್ಗದಲ್ಲಿ ತಹಶೀಲ್ದಾರ ಕಚೇರಿಗೆ ಬಂದಿರುತ್ತೇವೆ. ಪಂಚರನ್ನು ಚಾಸಾ-4 ರವರು ತಹಶೀಲ್ದಾರ ಮುಖೇನ ಬರಮಾಡಿಕೊಂಡಿರುತ್ತಾರೆ. ತಹಶೀಲ್ದಾರ ಕಚೇರಿಯಲ್ಲಿ ಚಾಸಾ-4 ರವರು ನಮ್ಮ ಜೊತೆಗೆ ಬಂದಿರುತ್ತಾರೆ. ಇಬ್ಬರು ಪಂಚರು ನಾವು ಹೋದಾಗ ಸ್ಥಳದಲ್ಲಿ ಇದ್ದರು. ತಹಶೀಲ್ದಾರ ಕಚೇರಿಯಿಂದ ಗೋಪಾಳಪುರ ಗ್ರಾಮ ಸುಮಾರು 12 ಕಿ ಮಿ ದೂರ ಆಗುತ್ತದೆ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಅಲ್ಲಿಂದ ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಮರಳು ಕುಪ್ಪೆಯಾಗಿ ಶೇಖರಣೆ ಮಾಡಿಟ್ಟಿರುವುದು ಕಂಡು ಬಂದಿರುತ್ತದೆ. ಅಂದಾಜು ಮರಳಿನ 10 ಕುಪ್ಪೆಗಳು ಇದ್ದವು. ಗುನ್ನೆ ಸ್ಥಳ ಊರಿನ ಸಮೀಪದಲ್ಲಿರುತ್ತದೆ. ನಾವು ಹೋದಾಗ ಅಲ್ಲಿ ಜನರು ಸೇರಿದ್ದರು ಆದರೆ ನಮ್ಮನ್ನು ನೋಡಿ ಬರಲು ನಿರಕಾರಿಸಿರುತ್ತಾರೆ. ಗುನ್ನೆ ಸ್ಥಳದಲ್ಲಿ ಸಾರ್ವ ಜನಿಕರನ್ನು ವಿಚಾರಣೆ ಮಾಡಲು ಪ್ರಯತ್ನ ಮಾಡಿರುತ್ತೇವೆ ಅವರು ನಮ್ಮನ್ನು ನೋಡಿ ಬರಲು ನಿರಾಕರಿಸಿರುತ್ತಾರೆ. ಮರಳಿನ ಯಾವ ಕುಪ್ಪೆ ಎಷ್ಟು ಮೆಟ್ರಿಕ್ ಟನ್ ಇತ್ತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

2. ಪಂಚನಾಮೆಯನ್ನು ಚಾಸಾ-4 ರವರು ಬರೆದಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ನಮ್ಮ ಇಲಾಖೆಯ ಅಧಿಕಾರಿಗಳು ಇದ್ದರು ಸಾರ್ವ ಜನಿಕರು ದೂರದಲ್ಲಿದ್ದರು ಸ್ಥಳಕ್ಕೆ ಬಂದಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕ್ ಬಂದಿ ಪೂರ್ವ ದಿಕ್ಕಿಗೆ ಸ ನಂ 30, ಪಶ್ಚಿಮ ದಿಕ್ಕಿಗೆ ಸ ನಂ 36/2/2, ಉತ್ತರ ಕ್ಕೆ- ಸ ನಂ 35/1, ದಕ್ಷಿಣ ದಿಕ್ಕಿಗೆ ಸ ನಂ 35/5 ಇರುತ್ತದೆ. ಮರಳನ್ನು ಶೇಖರಿಸಿಟ್ಟಿದ್ದ ಜಮೀನು ಸ ನಂ ನ್ನು ಚಾಸಾ-4 ರವರು ಗುರುತು ಮಾಡಿರುತ್ತಾರೆ ಚಾಸಾ-1 ಭೂಮಿ ಸಾಪ್ಪವೇರ ಸಹಾಯದಿಂದ ಜಮೀನು ಸರ್ವೆ ನಂಬರ್ ನ್ನು ಗುರುತು ಮಾಡಿರುತ್ತಾರೆ. ಪಂಚನಾಮೆ ಮಾಡಿದ ನಂತರ ಸಂಜೆ 6-30 ಗಂಟೆಗೆ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಆ

ಸಮಯದಲ್ಲಿ ನಮ್ಮ ಸಿಬ್ಬಂದಿಯವರು ನಮ್ಮ ಜೊತೆಗೆ ಇದ್ದರು. ಪಂಚನಾಮೆ ಮಾಡಿದ ನಂತರ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-2 ರಿಂದ 5 ರವರು ವಾಪಸ್ಸು ಬಂದಿರುತ್ತೇವೆ. ನಮ್ಮ ಜೊತೆಗೆ ಅವರು ಠಾಣಗೆ ಬಂದಿರುತ್ತಾರೆ. ದೂರು ನೀಡಿದ ದಿನವೆ ಪೋಲಿಸರಿಗೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪರವಾನಿಗೆ ಹೊಂದಿದವರು ಮರಳನ್ನು ಶೇಖರಿಸಿ ಇಡಬಹುದು ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ. ಯಾವ ವಾಹನದ ಸಹಾಯದಿಂದ ಮರಳನ್ನು ಸಂಗ್ರಹಿಸಿಟ್ಟಿದ್ದಾರೆಂದು ನನಗೆ ಮಾಹಿತಿ ಇಲ್ಲ ಆದರೆ 2ನೇ ಆರೋಪಿ ಮರಳನ್ನು ಸಂಗ್ರಹಿಸಿಟ್ಟಿರುವುದು ಚಾಸಾ-4 ಮತ್ತು ಅಲ್ಲಿದ್ದ ಜನರು ಮಾಹಿತಿಯನ್ನು ತಿಳಿಸಿರುತ್ತಾರೆ. ಚಾಸಾ-4 ರವರ ಮಾಹಿತಿ ಮೇರೆಗೆ ನಾನು ದೂರನ್ನು ಕೊಟ್ಟಿರುತ್ತೇನೆ. ಮರಳು ಸಂಗ್ರಹಿಸಿಟ್ಟಿದ್ದವರ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ. ಚಾಸಾ-1 ನಿಮ್ಮ ಮೇಲಾಧಿಕಾರಿಗಳು ಆಗಿರುತ್ತಾರೆ ಎಂದರೆ ಸರಿ. ನೀವು ನಿಮ್ಮ ಮೇಲಾಧಿಕಾರಿಗಳ ಆದೇಶದಂತೆ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ಆ ದಿನ ನಿಮಗೆ ಅಕ್ರಮವಾಗಿ ಮರಳು ಶೇಖರಣೆ ಮಾಡುತ್ತಿದ್ದಾರೆಂದು ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ನೀವು ದಾಳಿ ಮಾಡಲು ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಜಮೀನಿನಲ್ಲಿ ಮರಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-

ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ
ದೇವದುರ್ಗ